## ಜಿ.ಪಿ.ಯು–66 – ಬೇಸಾಯ ತಾಂತ್ರಿಕತೆಗಳು

ರಾಗಿ ನಮ್ಮಲ್ಲಿ ಮುಖ್ಯವಾಗಿ ಖುಷ್ಕಿ ಬೆಳೆ ಹಾಗೂ ಈ ಬೆಳೆಯನ್ನು ದಕ್ಷಿಣ ಕರ್ನಾಟಕದ ಪ್ರಮುಖ ಆಹಾರ ಬೆಳೆಯಾಗಿದ್ದು, ಈ ಭಾಗದ ರೈತರು ಇದನ್ನು ಯಥೇಚ್ಚವಾಗಿ ಬೆಳೆಯುತ್ತಾರೆ. ರಾಮನಗರ ಜಿಲ್ಲೆಯಲ್ಲಿ ರಾಗಿಯನ್ನು 0.77 ಲಕ್ಷ ಹೆಕ್ಟೇರ್‌ಗಳಲ್ಲಿ ಬೆಳೆಯುತ್ತಿದ್ದು, ಉತ್ಪಾದನೆಯು 1.65 ಲಕ್ಷ ಟನ್ ಇರುತ್ತದೆ.

ರಾಗಿ ಬೆಳೆಯಲ್ಲಿ ಅಧಿಕ ಇಳುವರಿಯನ್ನು ಪಡೆಯಲು ಕಾಲಕ್ಕನುಗುಣವಾದ ತಳಿಗಳು ಲಭ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಜಿ.ಪಿ.ಯು ತಳಿಗಳು ಪ್ರಮುಖ ಪಾತ್ರ ವಹಿಸುತ್ತಿದೆ. ಅದರಲ್ಲಿ ಜಿ.ಪಿ.ಯು.–66 ರಾಗಿ ತಳಿಯು ಹೌದು.

**ವಿಶಿಷ್ಟ ಲಕ್ಷಣಗಳು :**

- ಅವಧಿ : 110–115 ದಿನಗಳು
- ಇಲುಕು ಹಾಗೂ ಕುತ್ತಿಗೆ ಬೆಂಕಿರೋಗಗಳ ನಿರೋಧಕ ಶಕ್ತಿಯನ್ನು ಹೊಂದಿದೆ.
- ಬಿತ್ತನೆಯ ಸಮಯ : ಜುಲೈ–ಆಗಸ್ಟ್
- ಅಧಿಕ ಧಾನ್ಯ ಮತ್ತು ಮೇವು ಇಳುವರಿ
- ಇಳುವರಿ

| | | |
|---|---|---|
| ಇಳುವರಿ | – ನೀರಾವರಿ | – ಧಾನ್ಯ (18–20 ಕ್ವಿಂಟಾಲ್ / ಎಕರೆ) |
| | | ಮೇವು (4ಟನ್ / ಎಕರೆ) |
| | – ಖುಷ್ಕಿ | – ಧಾನ್ಯ (14–16 ಕ್ವಿಂಟಾಲ್ / ಎಕರೆ) |
| | | ಮೇವು (1.2–1.6 ಟನ್ / ಎಕರೆ) |

**ಬೇಸಾಯಕ್ಕೆ ಬೇಕಾಗುವ ಸಾಮಗ್ರಿಗಳು (ಪ್ರತಿ ಎಕರೆಗೆ):** ಬಿತ್ತನೆ ಬೀಜ –ನಾಟಿ ಬೆಳೆಗೆ 2 ಕಿ.ಗ್ರಾಂ., ಕೂರಿಗೆ ಬಿತ್ತನೆಗೆ 5 ಕಿ.ಗ್ರಾಂ.

ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ – 3 ಟನ್

| | | |
|---|---|---|
| ರಾಸಾಯನಿಕ ಗೊಬ್ಬರ | ಸಾರಜನಕ | – 20 ಕಿ.ಗ್ರಾಂ. (44 ಕೆ.ಜಿ. ಯೂರಿಯಾ) |
| | ರಂಜಕ | – 16 ಕಿ.ಗ್ರಾಂ. (100 ಕೆ.ಜಿ. ಎಸ್.ಎಸ್.ಪಿ.) |
| | ಪೊಟ್ಯಾಷ್ | – 10 ಕಿ.ಗ್ರಾಂ. (16 ಕೆ.ಜಿ. ಎಂ.ಓ.ಪಿ.) |

**ಬಿತ್ತನೆ ಕಾಲ :** ಸಾಮಾನ್ಯವಾಗಿ ಬೀಜವನ್ನು ಮುಂಗಾರಿನಲ್ಲಿ (ಜುಲೈ–ಆಗಸ್ಟ್) ಮತ್ತು ಬೇಸಿಗೆಯಲ್ಲಿ ಜನವರಿ–ಫೆಬ್ರವರಿಯಲ್ಲಿ ಬಿತ್ತನೆ ಮಾಡುತ್ತಾರೆ.

**ಅಂತರ** : 30 ಸೆಂ.ಮೀ. x 10 ಸೆಂ.ಮೀ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
*ಕೃಷಿ ವಿಜ್ಞಾನ ಕೇಂದ್ರ*
*ಚಂದೂರಾಯನಹಳ್ಳಿ, ಕಲ್ಯಾ ಪೋಸ್ಟ್, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ–562120*
*ದೂ. ಸಂ.: 08027100356 / 359, ಇ–ಮೇಲ್: kvkramanagara@gmail.com*
2013-14

**ರಾಸಾಯನಿಕ ಗೊಬ್ಬರಗಳು :** ಪ್ರತಿ ಎಕರೆಗೆ ಬಿತ್ತನೆ ಅಥವಾ ನಾಟಿ ಮಾಡುವ ಮೊದಲು ಅರ್ಧ ಭಾಗ ಸಾರಜನಕ (22 ಕೆ.ಜಿ. ಯೂರಿಯಾ) ಮತ್ತು ಪೂರ್ತಿ ರಂಜಕ (100 ಕೆ.ಜಿ. ಎಸ್.ಎಸ್.ಪಿ.) ಮತ್ತು ಪೊಟ್ಯಾಷ್ ರಾಸಾಯನಿಕ (16 ಕೆ.ಜಿ. ಎಂ.ಓ.ಪಿ.) ಗೊಬ್ಬರಗಳನ್ನು ಹಾಕಬೇಕು ಹಾಗೂ ಉಳಿದ 50% ಸಾರಜನಕ (22 ಕೆ.ಜಿ.) ಬಿತ್ತನೆಯಾದ 30 ದಿವಸಗಳ ನಂತರ ಮೇಲು ಗೊಬ್ಬರವಾಗಿ ಹಾಕಬೇಕು. ಜೊತೆಗೆ ಎಕರೆಗೆ 5 ಕೆ.ಜಿ. ಸತುವಿನ ಸಲ್ಫೇಟ್ ಮತ್ತು 4 ಕೆ.ಜಿ. ಬೋರಾಕ್ಸ್ ಲಘು ಪೋಷಕಾಂಶಗಳನ್ನು ಕೊಡಬೇಕು.

**ಬಿತ್ತನೆ** : ಬೀಜವನ್ನು ರಾತ್ರಿಯಿಡೀ ನೆನೆಸಿ, ಮರುದಿನ ಅದನ್ನು ಬಿತ್ತನೆ ಮಾಡಬೇಕು. ಬಿತ್ತನೆಯಾದ 10 ದಿವಸಗಳಲ್ಲಿ ಹೆಚ್ಚಾಗಿ ಬೆಳೆದಿರುವ ಗಿಡಗಳನ್ನು ಕೀಳಬೇಕು ಮತ್ತು ಮೊಳಕೆ ಬರದೇ ಇರುವ ಸ್ಥಳಗಳಲ್ಲಿ ಸಸಿಗಳನ್ನು ನೆಡಬೇಕು.

**ಕಳೆ ನಿಯಂತ್ರಣ ಮತ್ತು ಅಂತರ ಬೇಸಾಯ :** ಪ್ರಾರಂಭದಲ್ಲಿ ರಾಗಿಯು ನಿಧಾನವಾಗಿ ಬೆಳೆಯುವುದರಿಂದ ಬಿತ್ತನೆಯಾದ 20 ದಿವಸಗಳ ನಂತರ ಒಮ್ಮೆ ಕೈ ಕಳೆ ಮತ್ತು ಎಡಕುಂಟೆಯ ಸಹಾಯದಿಂದ ಅಂತರ ಬೇಸಾಯ ಮಾಡುವುದು, ಇದರಿಂದ 80–90% ಕಳೆ ನಿಯಂತ್ರಿಸುವುದಲ್ಲದೆ, ಹೆಚ್ಚಿನ ಕವಲೊಡೆಯುವಿಕೆ ಮತ್ತು ಉತ್ತಮ ಬೇರಿನ ಬೆಳೆವಣಿಗೆಗೆ ಗಾಳಿಯಾಡುವಿಕೆಯನ್ನು ಹೆಚ್ಚಿಸಿ ಗಿಡಗಳ ಸಮೃದ್ಧಿಯಾಗಿ ಬೆಳೆಯಲು ಸಹಕರಿಸುತ್ತದೆ.

**ಅಧಿಕ ಇಳುವರಿಗೆ ಮುಖ್ಯವಾದ ಖರ್ಚಿಲ್ಲದ ಬೇಸಾಯ ಕ್ರಮಗಳು :**

- ✓ ಬಿತ್ತನೆಗೆ 3 ವಾರಗಳ ಮೊದಲೇ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ ಗೊಬ್ಬರ ಮಣ್ಣಿನಲ್ಲಿ ಬೆರೆಸಿ.
- ✓ ಕಾಂಪೋಸ್ಟ್/ಕೊಟ್ಟಿಗೆ ಗೊಬ್ಬರವನ್ನು ಮಣ್ಣಿಗೆ ಬೆರೆಸಲು ತಡವಾದಲ್ಲಿ ಅದರ ಗುಪ್ಪೆಗಳನ್ನು ಮಣ್ಣಿನ ಪದರದಿಂದ ಮುಚ್ಚಿಡುವುದು ಲಾಭದಾಯಕ.
- ✓ ಬಿತ್ತನೆಯ ಕಾಲಕ್ಕನುಸಾರವಾಗಿ ತಳಿಗಳ ಆಯ್ಕೆ ಮಾಡಿ.
- ✓ 20–25 ದಿವಸಗಳ ಪೈರನ್ನು ನಾಟಿ ಮಾಡಿ.
- ✓ ಶುಷ್ಕ ವಾತಾವರಣದಲ್ಲಿ ಹೆಚ್ಚು ಅಂತರ ಬೇಸಾಯ ಪ್ರಯೋಜನಕಾರಿ.

<<<<<<<>>>>>>>

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
*ಕೃಷಿ ವಿಜ್ಞಾನ ಕೇಂದ್ರ*
*ಚಂದೂರಾಯನಹಳ್ಳಿ, ಕಲ್ಯಾ ಪೋಸ್ಟ್, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ–562120*
*ದೂ. ಸಂ.: 08027100356 / 359, ಇ–ಮೇಲ್: kvkramanagara@gmail.com*
2013-14